**Q.P. Code – 50201**

**ದ್ವಿತೀಯ ಬಿ.ಎ./ಬಿ.ಎಸ್ಸಿ, ಪದವಿ ಪರೀಕ್ಷೆ**

**ಅಕ್ಟೋಬರ್/ನವೆಂಬರ್ 2015**

**(ಅಂಚೆ ಮತ್ತು ತೆರಪಿನ ಶಿಕ್ಷಣ)**

**ಕನ್ನಡ ಭಾಷಾ (ನುಡಿ) ಪತ್ರಿಕೆ – ೨**

**(DAB/DSB 010) – ಪಠ್ಯಗಳು : ಪ್ರಾಚೀನ ಕನ್ನಡ ಕಾವ್ಯ–೨, ತುಘಲಕ್, ಆಯ್ದ ಸಣ್ಣ ಕಥೆಗಳು, ದೇವರು**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

1. (ಅ) **ಒಂದರ** ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ : **1 × 4 = 4**

(೧) ಬಲೆದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮ ಪತ್ರದ
ಜಲ ಬಿಂದುವಿನಂತೆ ಚಲಿತ ಮಾದುದು ಚಿತ್ತಂ

(೨) ಕುರಾನಿನಲ್ಲಿ ಸ್ಪಷ್ಟವಾಗಿ ಬರೆದ ಕಟ್ಟಳೆಗಳನ್ನು ಮುರಿದರೂ ಹೀಗೆ ಎನ್ನುವ ಧೈರ್ಯವೇ ನಿಮಗೆ? ಕುರಾನಿನ ಶಬ್ದಗಳು ಅರ್ಥವಾಗದಿದ್ರೆ, ಧರ್ಮಪಂಡಿತರನ್ನು ಕೇಳಬೇಕು – ಅವರನ್ನು ಆದರಿಸಬೇಕು ಅದನ್ನು ಬಿಟ್ಟು 'ನಿಷ್ಪಕ್ಷಪಾತ' ನ್ಯಾಯದ ಹೆಸರಿನಲ್ಲಿ ನೀನೆಷ್ಟು ಸಯ್ಯದರನ್ನು, ಉಲೇಮಾರನ್ನು ಕಾರಾಗೃಹದಲ್ಲಿ ತಳ್ಳಿಲ್ಲ?

(ಆ) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **$8 \times \frac{1}{2} = 4$**

ಧುರ, ನಿಯಮಿಸು, ಚಲಿತ, ಕೃತಾಂತ, ವಾರಿ, ಶೀತಕರ, ಮೂಡುವ, ನಂಜು, ಡೊಂಕು, ನಾರಿ, ಹುಸಿ, ದೀಪ್ತಿ.

(ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 2 = 4**

ಅನಂತ ವೀರ್ಯ ಕೇವಲಿಗಳು, ಗಮನ ಪ್ರಾಯಶ್ಚಿತ್ತ ನಿಮಿತ್ತಂ, ಚಂಡಕರ್ಮ.

2. **ನಾಲ್ಕಕ್ಕೆ** ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ : **4 × 3 = 12**

(೧) ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ
(೨) ಏಳುತಲೆ ಎದ್ದು ಯಾರ್‍ಯಾರ ನೆನೆಯಾಲಿ
(೩) ನುಡಿದರೆ ಮುತ್ತಿನ ಹಾರದಂತಿರಬೇಕು.
(೪) ಮನುಷ್ಯತೆಯ ಗಡಿ ಮೀರಿ ದೇವರಾಗಲಿಕ್ಕೆ ಹವಣಿಸುತ್ತಿದ್ದೀರಿ.
(೫) ನನ್ನ ಪ್ರಕೃತಿಯೇ ಹಾಗೆ, ಸುದೈವದಿಂದ ನನ್ನ ಕರ್ತವ್ಯವೂ ಅದೇ.
(೬) ಬಯಲಾಗಿ ಹೋಗಲಿ ದಿಲ್ಲಿ! ಆಗಲೇ ನನಗೆ ಸಮಾಧಾನ.

3. (ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 8 = 8**

(೧) ಭೀಷ್ಮರಿಗೆ ಪಟ್ಟಗಟ್ಟಿದಾಗ ಕರ್ಣನು ವಿರೋಧಿಸಿದುದು ಏಕೆ? ವಿವರಿಸಿ.
(೨) ಕೃಷ್ಣ–ಕರ್ಣರ ಸಂವಾದವನ್ನು ಸಂಗ್ರಹವಾಗಿ ಬರೆಯಿರಿ.

(ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 5 = 5**

(೧) ಕನಕದಾಸರು ಸಮಾಜವನ್ನು ವಿಡಂಬಿಸುವ ಬಗೆ ಹೇಗೆ?
(೨) ಜನಪದ ಗೀತೆಗಳಲ್ಲಿ ವ್ಯಕ್ತವಾಗಿರುವ ವಾತ್ಸಲ್ಯ ಭಾವವನ್ನು ಕುರಿತು ಬರೆಯಿರಿ.

4. (ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **1 × 8 = 8**

(೧) ತುಘಲಕ್‌ನ ವ್ಯಕ್ತಿತ್ವವನ್ನು ಅನಾವರಣಗೊಳಿಸಿ.

(೨) ಮುಹಮ್ಮದನನ್ನು ಪ್ರತಿಭಟಿಸುವ ಪಾತ್ರಗಳನ್ನು ಕುರಿತು ಬರೆಯಿರಿ.

(ಆ) **ಒಂದು** ಪಾತ್ರ ಕುರಿತು ಬರೆಯಿರಿ : **1 × 5 = 5**

(೧) ಅಝೀಝ್

(೨) ರತನ ಸಿಂಹ

5. **ಒಂದು** ಪ್ರಶ್ನೆಗೆ ಉತ್ತರಿಸಿ : **1 × 10 = 10**

(೧) ಕಮಲಾಪುರದ ಹೋಟ್ಲಿನಲ್ಲಿ ಕಥೆಯಲ್ಲಿ ವ್ಯಕ್ತವಾಗುವ ಹಾಸ್ಯವನ್ನು ಕುರಿತು ಬರೆಯಿರಿ.

(೨) ಮಂಗಮ್ಮ ಪುನಃ ಸಂಸಾರದೊಂದಿಗೆ ಇರಬಯಸಿದುದರ ಕಾರಣಗಳೇನು?

6. **ಒಂದು** ಪ್ರಶ್ನೆಗೆ ಉತ್ತರಿಸಿ : **1 × 10 = 10**

(೧) ಭಕ್ತಿ ವಿಚಾರ ಶಕ್ತಿಗೆ ತಡೆಯೊಡ್ಡುತ್ತದೆ ಎಂಬುದನ್ನು ಲೇಖಕರು ಸಾಧಿಸುವ ಬಗೆ ಹೇಗೆ?

(೨) ದೇವರ ಸೃಷ್ಟಿಯ ಹಿಂದೆ ಇರುವ ಮನುಷ್ಯ ವ್ಯಾಪಾರದ ಮನೋಭಾವವನ್ನು ಲೇಖಕರು ಚಿತ್ರಿಸಿರುವ ಬಗೆಯನ್ನು ಕುರಿತು ಬರೆಯಿರಿ.

7. **ಒಂದು** ಪ್ರಶ್ನೆಗೆ ಉತ್ತರಿಸಿ : **10**

(**80** ಅಂಕಗಳ ಸ್ಕೀಂನವರಿಗೆ **ಕಡ್ಡಾಯ**) :

(೧) ಮಾನವ ಮತದ ವಾದಿಗಳು ನಿರೀಶ್ವರ ವಾದಿಗಳಾದರೂ ದೈವ ಭಕ್ತರೆ ಹೇಗೆ? ಚರ್ಚಿಸಿ.

(೨) ದೇವರ ಅಸ್ತಿತ್ವವನ್ನು ವಿಚಾರಶಕ್ತಿ ಮತ್ತು ಅಂತರ್‌ದೃಷ್ಟಿಯಿಂದ ಸಾಧಿಸುವ ರೀತಿ ಹೇಗೆ? ಚರ್ಚಿಸಿ.

---